ಬೆಳಗ್ಗೆಯೇ ತೋಟದ ಕೆಲಸವೆಂದು ಮನೆಯಿಂದ ಹೊರಗೆ ಬಿದ್ದಿದ್ದ ಬೊಮ್ಮನಾಯ್ಕ, ಬಿಸಿಲು ಏರುತ್ತಲೇ ಮನೆಗೆ ಬಂದಿದ್ದ. ಅವನ ಮೊಗ ಕೆಂಪಾಗಿತ್ತು. ಅವನ ಮುಖದಲ್ಲಿ ನಿರಾಸೆಯೂ ಕವಿದಿತ್ತು. ಎಂದಿನಂತಲ್ಲ ಇಂದು ಅನ್ನಿಸಿಯೂ ಕೂಡ ಕಲ್ಲಮ್ಮ ಗಂಡನನ್ನು ಏನೆಂದು ವಿಚಾರಿಸದೆ ನೀರನ್ನು ಕೊಟ್ಟಿದ್ದಳು. ಆತ ಒಂದು ಇಡೀ ಮಿಳ್ಳೆ ನೀರನ್ನು ಕುಡಿದ. ಆಗಲೇ ಅವನಿಗೆ ಸ್ವಲ್ಪ ಸಮಾಧಾನ ಸಿಕ್ಕಿರಬೇಕು. ಗಂಟಲನ್ನು ಒರಸಿಕೊಳ್ಳುತ್ತ, 'ಸಾಯುಕೆ ಹಂದಿ ಗುಡ್ಡ, ರಾತ್ರಿ ಪೂರಾ ಬಾಳೆಗಿಡ ತೆಗದವಲ್ಲೇ. ಒಂದೇ ಒಂದು ಬುಡ ಕೂಡ ಇಡ್ಲ. ಅವರ್ ಹಿಂಡ್ ಹಾಳಾಗುಕೆ. ಹಿಂಗೆ ಆದ್ರೆ ನಾವ್ ಊರಲಿ ಇರಕೈತದಾ. ಬೇರೆ ಕಡೆ ನೋಡದೆ ಸಯ್ಯು'

